<u>ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ **.,**ಗುಬ್ಬಿ</u>

ಸಿ**.**ಸಿ**.5214/2022** ಸಿ**.**ಡಬ್ಲ್ಯೂ **-11**
ಪಿ**.**ಡಬ್ಲ್ಯೂ **- 11**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ /ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಆನಂದ್ ಕುಮಾರ್<br>ಗೋವಿಂದೇಗೌಡ<br>32 ವರ್ಷ<br>ಸಿ.ಪಿ.ಸಿ.267, ತುರುವೇಕೆರೆ ಪೋಲೀಸ್ ಠಾಣೆ<br>ತುರುವೇಕೆರೆ . |
| | ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ **18-12-2025** |

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ದಿಃ27-02-2022 ರಿಂದ ಇಲ್ಲಿಯವರೆಗೆ ನಾನು ತುರುವೇಕೆರೆ ಪೋಲೀಸ್ ಠಾಣೆ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಮ್ಮ ಠಾಣೆಯ ಠಾಣಾಧಿಕಾರಿಗಳಾದ ನರಸಿಂಹಮೂರ್ತಿ ರವರು ನನ್ನನ್ನು ಮತ್ತು ಚಾಸಾ 10 ರವರನ್ನು ಆರೋಪಿಯ ಬೆಂಗಾವಲಿಗೆ ನೇಮಿಸಿದ್ದು ಅದರಂತೆ ದಿಃ 28-07-2022 ರಂದು ನಿ.ಪಿ.10 ರಂತೆ ಚಾಸಾ 4 ಮತ್ತು 5 ರವರ ಸಮಕ್ಷಮ ಪಂಚನಾಮೆಯನ್ನು ನಡೆಸಿದ್ದು ಸದರಿ ಪಂಚನಾಮೆಯಕಾಲಕ್ಕೆ ಒಂದು ಮಾರುತಿ ಸುಜುಕಿ ಕಾರ್ ಕೆಎ-01-ಎಜಿ-3052, 2 ಖಾಲಿ ಕ್ಯಾನ್ ಗಳು ಮತ್ತು 3 ಚಕ್ರಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 2-30 ರಿಂದ 3-30 ರವರೆಗೆ ನಡೆಸಲಾಯಿತು. ಸದರಿ ಪಂಚನಾಮೆಯಕಾಲಕ್ಕೆ ಆರೋಪಿ ಸಹ ಹಾಜರಿದ್ದರು. ನಿ.ಪಿ.10 ರ ಮೇಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.10(ಡಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ.3 ರಲ್ಲಿರುವ ಕಾರಿನ ಚಕ್ರಗಳನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಇದಕ್ಕೆ ಸಂಬಂದಿದಂತೆ ನಮ್ಮ ಠಾಣಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆ.ಜಿ.ಎನ್. ವಕೀಲರಿಂದ**

ನಿ.ಪಿ.10 ಪಂಚನಾಮೆಯ ಕಾಲಕ್ಕೆ ನನಗೆ ಹಾಜರಿರಲು ನನ್ನ ಮೇಲಾಧಿಕಾರಿಗಳು ನೇಮಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.10 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದು ನನ್ನ ಮೇಲಾಧಿಕಾರಿಗಳ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲ್ಕಂಡ ಮುದ್ದೆಮಾಲುಗಳನ್ನು ಸ್ಥಳದಿಂದ ಅಮಾನತ್ತುಪಡಿಸಿಕೊಂಡಿಲ್ಲ ನನ್ನ ಮೇಲಾಧಿಕಾರಿಗಳ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.10 ಅನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಗುಬ್ಬಿ**